ಆಗಿರುವ ಆ ತೀರ್ಮಾನದ ಬಗ್ಗೆ ಬರೆದಿರತಕ್ಕಂತಹ ಪತ್ರವೇ ಇದುವರೆಗೆ ಸರ್ಕಾರಕ್ಕೆ ಮುಟ್ಟಿಲ್ಲ. ಎಲ್ಲವನ್ನು ಅಲ್ಲೇ ಮುಚ್ಚಿಡುವ ಪ್ರಯತ್ನ ನಡೆದಿದೆ. ಅವರು ಒಂದು ಉದಾಹರಣೆಯನ್ನು ಮಾತ್ರ ಹೇಳಿದ್ದಾರೆ. ಆ ಖರೀದಿ ಸಮಿತಿಯಲ್ಲಿ ಇಂಥ ಹತ್ತಾರು ಸಾಮಗ್ರಿಗಳನ್ನು ಕೊಂಡುಕೊಳ್ಳಲು ತೀರ್ಮಾನ ಮಾಡಿದ್ದಾರೆ., ಪ್ರತಿಯೊಂದು ಬಾಬಿನಲ್ಲು ಕೋಟಿಗಟ್ಟಲೆ ಹಣದ ಲೂಟಿಯಾಗುತ್ತಿದೆ. ಆದ್ದರಿಂದ ತಕ್ಷಣ ಇದರ ಬಗ್ಗೆ ವಿಚಾರಣೆ ಮಾಡಲು ನಿವೃತ್ತ ಜಿಲ್ಲಾ ನ್ಯಾಯಾದೀಶರನ್ನು ನೇಮಕ ಮಾಡಬೇಕು. ಮತ್ತು ಏನಾಗಿದೆ ಎಂಬ ವರದಿ ತರಿಸಬೇಕು. ದಯಮಾಡಿ ಈ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾಹಿತಿಯನ್ನು ನನಗೆ ಕೊಟ್ಟರೆ ಯಾರಿಂದ ವರದಿಯನ್ನು ತರಿಸಬೇಕೋ ಅವರಿಂದ ತರಿಸುತ್ತೇನೆ. ನನ್ನ ಹತ್ತಿರ ಆ ಮಾಹಿತಿ ಇಲ್ಲ. ಆದ್ದರಿಂದ ಆ ಮಾಹಿತಿ ನನಗೆ ಕೊಟ್ಟರೆ ಸರ್ಕಾರ ಖಂಡಿತವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

(ಈ) ಕೃಷಿ ವಿಶ್ವವಿದ್ಯಾನಿಲಯದ ಸಿಬ್ಬಂದಿ ಬಗ್ಗೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರ ಗಮನಕ್ಕೆ ಗಂಭೀರವಾದ ಒಂದು ವಿಚಾರವನ್ನು ತರಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ಇದೆ. ಅಲ್ಲಿರುವಂಥ ಎಲ್ಲಾ ಶಿಕ್ಷಕರು ಈಗಾಗಲೇ ಮುಷ್ಕರದಲ್ಲಿದ್ದಾರೆ. ವಿಶ್ವವಿದ್ಯಾನಿಲಯದ ಅನುದಾನ ಆಯೋಗದ ಶಿಫಾರಸ್ಸಿನಂತೆ 1996ರ ಜನವರಿ ಒಂದರಿಂದಲೇ ಜಾರಿಗೆ ಬರುವಂತೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಮಾರ್ಚ್ 3, 1999ರಂದು ಎಲ್ಲಾ ರಾಜ್ಯಗಳ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವಂತೆ ಪರಷ್ಕೃತ ವೇತನವನ್ನು ನೀಡಲು ಆಜ್ಞೆಯನ್ನು ಹೊರಡಿಸಿದೆ. ರಾಜ್ಯ ಸಚಿವ ಸಂಪುಟ ಸಹ 28.9.1999ರಂದು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ. ತದನಂತರ 14.1.2000ರಲ್ಲಿ ಇದರ ಬಗ್ಗೆ ರಾಜ್ಯ ಪತ್ರದಲ್ಲಿ ಪ್ರಕಟಣೆ ಸಹ ಬಂದಿರುತ್ತದೆ. ಆದರೆ ಆ ಪ್ರಕಟಣೆಯಲ್ಲಿ ಪ್ರಾರಂಭಿಕ ವೇತನವಾದ ರೂ.14,940ನ್ನು ಕೈಬಿಡಲಾಗಿದೆ. ಆ ವೇತನ ಶ್ರೇಣಿಯನ್ನು ಇದರಲ್ಲಿ ಸೇರಿಸಿಲ್ಲ. ಅವರು ಮುಷ್ಕರ ಮಾಡಲು ಹೋಗುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ವಿವಿಧ ಪರೀಕ್ಷೆಗಳು ಪ್ರಾರಂಭವಾಗಬೇಕಿತ್ತು, ಆದರೆ ಅದನ್ನು ಮುಂದೂಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರ ಬಗ್ಗೆ ಬಹುಶಃ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರದಿಂದ ಈಗಾಗಲೆ 80 ಪರ್‌ಸೆಂಟ್ ಹಣವನ್ನು ಸಹ ಕೊಟ್ಟಿದ್ದಾರೆ. ಅದರ ಜೊತೆಗೆ ಬಡ್ಡಿಯ ಹಣ 42 ಲಕ್ಷ ರೂಪಾಯಿಗಳೂ ಕೂಡ ಬಂದಿದೆಯೆಂದು ನನ್ನ ಗಮನಕ್ಕೆ ಬಂದಿದೆ. ರಾಜ್ಯ ಸರ್ಕಾರ ಶೇಕಡ 20ರಷ್ಟು ಮಾತ್ರ

ಹಣ ಕೊಡುವುದು ಬಾಕಿ ಇದೆ. ಅದನ್ನು ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಕೇಂದ್ರದಿಂದ ಬರುವ ಅನುದಾನದಲ್ಲಿ ಕಡಿತವಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು 17.4.2000ರಿಂದ ಮುಷ್ಕರ ಹೂಡಿದ್ದಾರೆ. ರಾಜ್ಯಪತ್ರದಲ್ಲಿ ಏನು ತಾವು ಪ್ರಾರಂಭಿಕ ವೇತನ ಶ್ರೇಣಿಯಾದ ರೂ. 14,940ನ್ನು ಕೈಬಿಟ್ಟಿದ್ದೀರಿ ಅದನ್ನು ತಕ್ಷಣ ಸೇರಿಸಬೇಕು ಮತ್ತು ರಾಜ್ಯದ ಪಾಲಾದ 20 ಪರ್‌ಸೆಂಟ್ ಹಣವನ್ನು ಕೊಟ್ಟು ಕೇಂದ್ರ ಸರ್ಕಾರದಿಂದ ಬಂದಿರುವ 80 ಪರ್‌ಸೆಂಟ್ ಹಣವನ್ನು ಪಡೆದುಕೊಂಡು ಅವರಿಗೆ ತಕ್ಷಣ ಪಾವತಿ ಮಾಡಬೇಕು. ಅವರು ಮುಷ್ಕರವನ್ನು ವಾಪಸ್ ಪಡೆಯುವಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಲವಾರು ವಿದ್ಯಾರ್ಥಿಗಳು ಬೇರೆ ಬೇರೆ ಕಡೆ ಪರೀಕ್ಷೆಗೆ ಹೋಗಬೇಕಾಗಿದೆ. ಅವರೆಲ್ಲ ಬಹಳ ತೊಂದರೆಗೆ ಈಡಾಗಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸಿ ಶಿಕ್ಷಕರಿಗೆ ಅನುಕೂಲ ಮಾಡಿಕೊಟ್ಟು ಮುಷ್ಕರವನ್ನು ವಿತ್‌ಡ್ರಾ ಮಾಡಿಸಿ ಆ ಪರೀಕ್ಷೆಗಳನ್ನು ನಡೆಸುವ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸಚಿವ ಸಂಪುಟದ ತೀರ್ಮಾನವಾಗಿ ಅದನ್ನು ಕೊಡಬೇಕೆಂದು ನಮ್ಮ ಕಾಲದಲ್ಲಿ ತೀರ್ಮಾನ ಆಗಿದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಅದೇನು ಆಗಿದೆಯೋ ಅದನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗಿದೆ. ಅವರ ಸರ್ವೀಸ್ ಮ್ಯಾಟರ್ಸ್ ಬಗ್ಗೆ ಎಷ್ಟೇ ಪ್ರಯತ್ನ ಪಟ್ಟರೂ ಅದು ನನಗೆ ಅರ್ಥವಾಗುವುದಿಲ್ಲ. ನಾನು ಸಚಿವನಾಗಿದ್ದಾಗ ಇದರ ಬಗ್ಗೆ ಎಷ್ಟೇ ಪ್ರಯತ್ನ ಪಟ್ಟರೂ ನನ್ನ ತಲೆಗೆ ಹೋಗಲಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಲೂ ಆಗಲಿಲ್ಲ. ಆದ್ದರಿಂದ ನಿಯಮಾವಳಿ ಪ್ರಕಾರ ಏನು ಮಾಡಬೇಕೊ ಆ ರೀತಿ ತೀರ್ಮಾನ ಮಾಡಿ ಎಂದು ಸೂಚನೆ ಕೊಟ್ಟಿದ್ದೆ, ಅದರಂತೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ಇಲ್ಲಿ ಏನಾಗಿದೆಯೆಂದರೆ, ಹಿಂದೆ ಆಡಳಿತ ಮಂಡಳಿಗಳು ಮತ್ತು ಸರ್ಕಾರಗಳು ಅಲ್ಲಿರುವ ಬೋಧಕ ವರ್ಗಕ್ಕೆ ಅನುಕೂಲವಾಗುವ ಹಾಗೆ ತೀರ್ಮಾನವಾಗಿದೆ. ಒಂದು ಸಲ ಯು.ಜಿ.ಸಿ. ಸ್ಕೇಲ್ ಎಂದು ಹೇಳುತ್ತಾರೆ, ಮತ್ತೊಂದು ಸಲ ಐ.ಸಿ.ಆರ್. ಸ್ಕೇಲ್ ಎಂದು ಹೇಳುತ್ತಾರೆ. ಹೀಗಾಗಿ ಯಾವುದಕ್ಕೂ ಅನುಕೂಲವಾಗತಕ್ಕ ರೀತಿಯಲ್ಲಿ ಈಗಾಗಲೆ ಅದು ತೀರ್ಮಾನವಾಗಿಬಿಟ್ಟಿದೆ. Now it is a state accompany ಯು.ಜಿ.ಸಿ.ಯಿಂದ ಬರುತ್ತದೆ ಮತ್ತು ಐ.ಸಿ.ಆರ್. ಸ್ಕೇಲ್ ಸಹ ಇದೆ. ಅಲ್ಲಿಂದ ಹಣ ಬಂದಿದೆ. ನಾವು ನಮ್ಮ ರಾಜ್ಯ ಸರ್ಕಾರದ ಪಾಲನ್ನು ಅಂದರೆ ವಿಶ್ವವಿದ್ಯಾನಿಲಯದ ಪಾಲನ್ನು ಕೊಡದಿದ್ದರೆ ಅಲ್ಲಿಂದ ಬಂದಿರುವ ಹಣವನ್ನು ಬಳಕೆ ಮಾಡಿಕೊಳ್ಳಲು ಸಾಧ್ಯವಾಗದಿರುವ ಪರಿಸ್ಥಿತಿ ಇದೆ. ಅದು ಯಾವ ರೀತಿ ಕೆಲಸ ಮಾಡುತ್ತಿದೆ, ಅಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ನಾನು ಹೇಳಲು ಹೋಗುವುದಿಲ್ಲ. ಆದರೆ ಅದನ್ನು ಕೊಡಬೇಕೆಂದು ಈಗಾಗಲೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ನಮ್ಮ ಕಾರ್ಯದರ್ಶಿಗಳು ತಾಂತ್ರಿಕವಾದ ಆಕ್ಷೇಪಣೆಯನ್ನು ಮಾಡಿದ್ದಾರೆ. ಅವರ

ಆಕ್ಷೇಪಣೆಯನ್ನು ಸುಲಭವಾಗಿ ತೆಗೆದುಹಾಕಬೇಕೆಂದು ನಾನು ಹೇಳುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಕಾರ್ಯದರ್ಶಿಯವರು ಪ್ರತಿಯೊಂದು ಕಡತವನ್ನು ಬಹಳ ಮೆಟಿಕ್ಯುಲಸ್ ಆಗಿ ಡೀಲ್ ಮಾಡುತ್ತಾರೆ. ಅವರು ಹಾಕಿರುವ ಆಕ್ಷೇಪಣೆ ಸಾಧುವಾದುದೆಂದು ಹೇಳುವ ಮಟ್ಟದಲ್ಲಿ ನಾನು ಇಲ್ಲ. ಆದರೆ ಇವತ್ತು ಎರಡು ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ನಡೆಯುತ್ತಿಲ್ಲ. ಅವರು ಮುಷ್ಕರ ಮಾಡಿರುವುದು, ಮೆರವಣಿಗೆ ಮಾಡಿರುವುದೆಲ್ಲ ಆಗಿದೆ. ಇದು ಕೃಷಿಗೆ ಸಂಬಂಧಿಪಟ್ಟಿರುವ ಕೆಲಸವಾಗಿರುವುದರಿಂದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರತಿ ದಿನ ಕೆಲಸ ನಡೆಯಬೇಕಾಗುತ್ತದೆ. ಕೃಷಿ ಬಗ್ಗೆ ಸಂಶೋಧನೆ ಸಹ ಪ್ರತಿ ದಿನ ನಡೆಯಬೇಕಾಗುತ್ತದೆ. ಅವರು ಮುಷ್ಕರ ಮಾಡಲು ಹೋದರೆ ಬೋಧನೆ, ಸಂಶೋಧನೆ ಎಲ್ಲವು ನಿಂತು ಹೋಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಅನುಕೂಲಕರವಾದ ರೀತಿಯಲ್ಲಿ ಪರಿಗಣಿಸಿ ಅವರಿಗೆ ಏನು ಕೊಡಬೇಕಾಗಿದೆ ಅದನ್ನು ಕೊಡಿ ಮತ್ತು ಕೇಂದ್ರದಿಂದ ಬರಬೇಕಾಗಿರುವ ಹಣವನ್ನು ಬಳಕೆ ಮಾಡಿಕೊಳ್ಳಬೇಕಾಗಿರುವ ಕಾರಣ ದಯವಿಟ್ಟು ಅದಕ್ಕೆ ಒಪ್ಪಿಗೆ ನೀಡಬೇಕೆಂದು ಎರಡೂ ಕೃಷಿ ವಿಶ್ವವಿದ್ಯಾನಿಲಯದವರ ಪರವಾಗಿ ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರು ಮತ್ತು ಮಾನ್ಯ ಬೈರೇಗೌಡರು ತಂದಿರತಕ್ಕಂಥ ವಿಷಯಗಳ ಬಗ್ಗೆ ಬಹುಶಃ ನನ್ನ ಹೇಳಿಕೆಯನ್ನು ಕೊಟ್ಟಾಗ ಇದರಲ್ಲಿನ ವಾಸ್ತವಿಕ ಅಂಶಗಳು ಏನೆಂಬುದು ನಿಮಗೆಲ್ಲಾ ಗೊತ್ತಾಗುತ್ತದೆ:

ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ದಿನಾಂಕ: 17-4-2000ರಂದು ಕೃಷಿ ವಿಶ್ವವಿದ್ಯಾನಿಲಯದ ಶಿಕ್ಷಕರು ದಿನಾಂಕ: 17-4-2000ರಿಂದ ಮುಷ್ಕರ ಹೋಗಿರುತ್ತಾರೆಂದು ವರದಿ ಮಾಡಿರುತ್ತಾರೆ. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯದ ಶಿಕ್ಷಕರು ದಿನಾಂಕ: 19-4-2000 ರಿಂದ ಮುಷ್ಕರ ಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ. ಯು.ಜಿ.ಸಿ : ಐಸಿಎಆರ್ ವೇತನ ಶ್ರೇಣಿಯನ್ನು ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಶಿಕ್ಷಕರಿಗೆ ನೀಡಬೇಕಾಗಿದ್ದ ಬಾಕಿಯನ್ನು ಪಾವತಿ ಮಾಡದಿರುವುದಕ್ಕಾಗಿ ಹಾಗೂ ಯುಜಿಸಿ : ಐಸಿಎಆರ್ ಪರಿಷ್ಕೃತ ವೇತನ ಶ್ರೇಣಿಯನ್ನು ಪೂರ್ಣವಾಗಿ ಅನುಷ್ಠಾನಗೊಳ್ಳುವವರೆಗೆ ಅನಿರ್ದಿಷ್ಟ ಮುಷ್ಕರವನ್ನು ಕೈಗೊಳ್ಳುವುದಾಗಿ ಶಿಕ್ಷಕರ ಸಂಘದಿಂದ ಸ್ವೀಕೃತವಾಗಿರುವ ದಿನಾಂಕ: 13-4-2000ರ ಪತ್ರದ ಪ್ರತಿಯನ್ನು ಸಹ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಕಳುಹಿಸಿರುತ್ತಾರೆ.

ಈ ಬಗ್ಗೆ, ದಿನಾಂಕ: 14-1-2000ರ ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಡಿ 25 ಎಯುಎಂ 99 ರಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಶಿಕ್ಷರಿಗೆ ಹಾಗೂ ಕೆಲವು ಅಧಿಕಾರಿಗಳಿಗೆ

ಯುಜಿಸಿ: ಐಸಿಎಆರ್‌ನ ಪರಿಷ್ಕೃತ ವೇತನ ಶ್ರೇಣಿಯನ್ನು ನೀಡಲು ಸರ್ಕಾರವು ಮಂಜೂರಾತಿ ನೀಡಿದೆ. ದಿನಾಂಕ: 13-4-2000ರಂದು ಕೃಷಿ ಸಚಿವರು ಇಬ್ಬರು ಉಪಕುಲಪತಿಗಳ ಮತ್ತು ಆರ್ಥಿಕ ಇಲಾಖೆ ಹಾಗೂ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಅಧಿಕಾರಿಗಳ ಸಭೆಯೊಂದನ್ನು ಸಹ ತೆಗೆದುಕೊಂಡಿರುತ್ತಾರೆ. ಎರಡೂ ಉಪಕುಲಪತಿಗಳು ತಿಳಿಸಿರುವಂತೆ ಶಿಕ್ಷರ ಮುಖ್ಯ ಬೇಡಿಕೆಯು ದಿನಾಂಕ: 1-4-2000 ರಂದು ಅನ್ವಯವಾಗುವಂತೆ ಪರಿಷ್ಕೃತ ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸುವುದಾಗಿದೆ. ಏಪ್ರಿಲ್ 2000ರಿಂದ ಪರಿಷ್ಕೃತ ವೇತನ ಶ್ರೇಣಿಯನ್ನು ನೀಡುವುದಾದರೆ ಬಾಕಿ ಪಾವತಿಗಾಗಿ ಶಿಕ್ಷಕರು ಕಾಯಲು ತಯಾರಿರುವುದಾಗಿ ಇಬ್ಬರೂ ಉಪಕುಲಪತಿಗಳು ತಿಳಿಸಿರುತ್ತಾರೆ.

ಚರ್ಚೆಯ ನಂತರ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

(1) ಏಪ್ರಿಲ್ 2000 ರಿಂದ ಶಿಕ್ಷಕ ವೃಂದಕ್ಕೆ ಪರಿಷ್ಕೃತ ವೇತನ ಶ್ರೇಣಿಯ ವೇತನವನ್ನು ಪಾವತಿಸಲು;

(2) ಮೇಲ್ಕಂಡ ಉದ್ದೇಶದ ವೇತನ ನಿಗಧಿಯು ಹೊರಡಿಸಲಾಗಿರುವ ಸರ್ಕಾರೀ ಆದೇಶದಂತಿರತಕ್ಕದ್ದು. ಸಹ ಪ್ರಾಧ್ಯಾಪಕರುಗಳ ಮತ್ತೇನಾದರೂ ಬೇಡಿಕೆ ಇದ್ದಲ್ಲಿ ಅದನ್ನು ಪ್ರತ್ಯೇಕವಾಗಿ ಪರಿಶೀಲಿಸಲು ಮತ್ತು ಅರ್ಹರಾಗಿದ್ದಲ್ಲಿ ವ್ಯತ್ಯಾಸವನ್ನು ಮುಂದೆ ನೀಡಲು;

(3) ಶೇಕಡ 20 ರಷ್ಟು ಭಾಗದ ಬಾಕಿಯನ್ನು ಸೂಕ್ತ ಕಂತುಗಳಲ್ಲಿ ಸಮಂಜಸ ಹಂತದಲ್ಲಿ ರಾಜ್ಯ ಸರ್ಕಾರವು ಪಾವತಿಸಲು;

(4) ಏಪ್ರಿಲ್ 2000 ರಿಂದ ಪರಿಷ್ಕೃತ ವೇತನ ಶ್ರೇಣಿಯನ್ನು ಪಾವತಿ ಮಾಡಲು ಅನುಕೂಲವಾಗುವಂತೆ ತ್ರೈಮಾಸಿಕ ಅಭಿವೃದ್ಧಿ ಗ್ರಾಂಟ್ ಮತ್ತು ಮಾಸಿಕ ಬ್ಲಾಕ್ ಗ್ರಾಂಟ್‌ನ್ನು ಬಿಡುಗಡೆ ಮಾಡುವ ಸಲುವಾಗಿ ಎರಡೂ ವಿಶ್ವವಿದ್ಯಾನಿಲಯಗಳು ಕೂಡಲೇ ಪ್ರಸ್ತಾವನೆಯನ್ನು ಕಳುಹಿಸಲು ಆರ್ಥಿಕ ಇಲಾಖೆಯು ಎರಡೂ ವಿಶ್ವವಿದ್ಯಾನಿಲಯಗಳ ಪ್ರಸ್ತಾವನೆ ಸ್ವೀಕೃತವಾದೊಡನೆಯೆ ಅನುದಾನವನ್ನು ಬಿಡುಗಡೆ ಮಾಡತಕ್ಕದ್ದು;

(5) ದಿನಾಂಕ: 31-3-2000ರ ಮುನ್ನ ಡ್ರಾ ಮಾಡಲಾಗದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 139 ಲಕ್ಷ ಹಾಗೂ ಧಾರವಾಡದ 58.00 ಲಕ್ಷ ರೂ.ಗಳನ್ನು ಈಸಾಲಿನ ಎರಡೂ ವಿಶ್ವವಿದ್ಯಾನಿಲಯಗಳ ಅನುದಾನದಲ್ಲಿ ಕೂಡಲೇ ಬಿಡುಗಡೆ ಮಾಡುವುದು ಮತ್ತು ಕೃಷಿ ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಇದನ್ನು ಈ ಸಾಲಿನ ಹೆಚ್ಚುವರಿ ಅನುದಾನವೆಂದು ಪರಿಗಣಿಸಬೇಕೆಂದು ಅಭಿಪ್ರಾಯವನ್ನು ಆರ್ಥಿಕ

ಇಲಾಖೆಯು ಪರಿಶೀಲಿಸುವುದು.

ಸಹ ಪ್ರಾಧ್ಯಾಪಕರುಗಳಿಗೆ ಹಚ್ಚಿನ ಪ್ರಾರಂಭಿಕ ವೇತನವನ್ನು ನೀಡುವ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗಿದ್ದು, ಇದಕ್ಕೆ ಯುಜಿಸಿ: ಐಸಿಎಆರ್ ನಿಗಧಿಪಡಿಸಿರುವ ಕಾರಿಯರ್ ಅಡ್ವಾನ್ಸ್‌ಮೆಂಟ್ ಮುಂತಾದವು ತೃಪ್ತಿಪಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ಆದರೂ ಸಹ ಏಪ್ರಿಲ್ 2000ರ ನಂತರದ ವೇತನ ಶ್ರೇಣಿಯು ದಿನಾಂಕ: 14-1-2000ರ ಸರ್ಕಾರಿ ಆದೇಶವಂತಿರಬೇಕಾಗುತ್ತದೆ. ಯು.ಜಿ.ಸಿ.ಐ.: ಐ.ಸಿ.ಎ.ಆರ್. ಷರತ್ತಿನ ಪ್ರಕಾರ ಸಹ ಪ್ರಾಧ್ಯಾಪಕರಾಗಿರುವ ಶಿಕ್ಷಕರ ವಿಷಯವನ್ನು ಅವರುಗಳಿಗೆ ಅರ್ಹರಾಗಿದ್ದಲ್ಲಿ ಅದನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗಿದ್ದು, ಪರಿಶೀಲಿಸಿದ ನಂತರ ವ್ಯತ್ಯಾಸವನ್ನು ಸಹ ಪಾವತಿ ಮಾಡಲಾಗುವುದು.

ಮೇಲ್ಕಂಡ ತೀರ್ಮಾನಗಳನ್ನೊಳಗೊಂಡ ಸಭೆಯ ನಡವಳಿಗಳನ್ನು ಇಬ್ಬರೂ ಉಪಕುಲಪತಿಗಳಿಗೆ ಕಳುಹಿಸಲಾಗಿದೆ.

ಇದಾದನಂತರ ಕಳೆದ ಎರಡು ದಿವಸಗಳಲ್ಲಿ, ಮೊನ್ನೆ ದಿವಸ ನನ್ನ ಕಛೇರಿಯಲ್ಲಿ ಇವರೆಲ್ಲರನ್ನೂ ಕರೆಸಿದ್ದೆ, ಯಾರು ಅಜಿಟೇಟಿಂಗ್ ಟೀಚರ್ಸ್ ಇದ್ದಾರೆ, ಅವರ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಗೂ ಇಬ್ಬರು ಕುಲಪತಿಗಳನ್ನು ಕರೆದು ನಾನು ಚರ್ಚೆ ಮಾಡಿದ್ದೇನೆ. ಅವರ ಜೊತೆ ವ್ಯಾಪಕವಾಗಿ ಚರ್ಚೆ ಮಾಡಿದಾಗ, ಅವರು ಸೀಮಿತವಾಗಿ ಯಾವುದೋ ಒಂದು ಪರ್ಟಿಕ್ಯುಲರ್ ಡಿಮ್ಯಾಂಡ್ ಇಟ್ಟುಕೊಂಡು ಸ್ಟ್ರೈಕ್ ಮಾಡುವುದಕ್ಕಿಂತ ಹೆಚ್ಚಾಗಿ ಅಲ್ಲಿ ವಿಶ್ವವಿದ್ಯಾಲಯದ ಮಟ್ಟದಲ್ಲಿರತಕ್ಕಂಥ ಕೆಲವು ಲೋಪದೋಷಗಳನ್ನು ಕೂಡ ಹೇಳಿದರು, ಅದನ್ನು ವೈಸ್-ಛಾನ್ಸಲರ್ಸ್ ಮಾಡಲಿಲ್ಲ ಎನ್ನತಕ್ಕ ರೀತಿಯಲ್ಲಿ, ಅನೇಕ ರೀತಿಯಾದಂತಹ ಬೇಡಿಕೆಗಳು ಇದ್ದವು. ಬಹುಶಃ ಅದರ ಬಗ್ಗೆ ಒಂದೊಂದು ವಿವರಣೆ ಕೊಡಬೇಕಾದರೆ ಬಹಳಷ್ಟು ಕಾಲ ಬೇಕಾಗುತ್ತದೆ. ಅದೆಲ್ಲವನ್ನು ತಿಳಿದುಕೊಂಡು ವಿಶ್ವವಿದ್ಯಾಲಯದ ಉಪಕುಲಪತಿಗಳ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನವನ್ನು ಮಾಡಿದ್ದೇವೆ. ಹಾಗೆ ತೀರ್ಮಾನವನ್ನು ಮಾಡಿದ ಮೇಲೆ ಇಬ್ಬರೂ ಯೂನಿವರ್ಸಿಟಿ ಅಸೋಸಿಯೇಷನ್‌ರವರು ಕೂಡ ಸ್ಟ್ರೈಕ್‌ನ್ನುಕಾಲ್-ಆಫ್ ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟು ಹೋದರು. ಈಗಾಗಲೇ ನಿನ್ನೆ ಧಾರವಾಡದ ವಿಶ್ವವಿದ್ಯಾಲಯದಲ್ಲಿ ಸ್ಟ್ರೈಕ್‌ನ್ನು ಕಾಲ್-ಆಫ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಇನ್ನೂ ಕಾಲ್-ಆಫ್ ಮಾಡಿಲ್ಲ. ಈಗಾಗಲೇ ನಮ್ಮ ಯೂನಿವರ್ಸಿಟಿಯ ವೈಸ್-ಛಾನ್ಸಲರ್ ಕೂಡ ಅವರ ಜೊತೆ ಕುಳಿತುಕೊಂಡು ಮಾತುಕತೆ ನಡೆಸುತ್ತಿದ್ದಾರೆ. ಆದರೆ ಒಂದು ವಿಚಾರ ಏನೆಂದರೆ ನಾನು ಸ್ಪಷ್ಟವಾಗಿ ಶಿಕ್ಷಕರಿಗೆ ಏನು ಸವಲತ್ತು ಕೊಡಬೇಕು ಎನ್ನತಕ್ಕದ್ದರ ಬಗ್ಗೆ ಒಪ್ಪಿಕೊಂಡಿದ್ದೇನೆ. ಆದರೆ ತಾವು ಹೇಳಿರತಕ್ಕಂತಹ ಒಂದು ಮಾತು, 1490 ಅಸೋಸಿಯೇಟ್ ಪ್ರೊಫೆಸರ್ಸ್‌ಗೆ

ಎನ್ನತಕ್ಕದ್ದು, ಅದು ಅಸಿಸ್ಟೆಂಟ್ ಪ್ರೊಫೆಸರ್‌ನಿಂದ ಅಸೋಸಿಯೇಟ್ ಪ್ರೊಫೆಸರ್ ಆಗಬೇಕಾದಾಗ ಯುಜಿಸಿ ಸ್ಕೇಲ್ ಅಂತ ಇದೆ, ನಾವು ಕೊಡುತ್ತಿರತಕ್ಕಂತಹ ಯುಜಿಸಿ ಸ್ಕೇಲ್ 1.1.1996ರಿಂದ ಅದನ್ನು 1996ರಿಂದ ಇಲ್ಲಿಯವರೆಗೂ ಕೊಡಬೇಕಾಗುತ್ತದೆ. ನಮ್ಮಲ್ಲಿ ತೊಂದರೆ ಏನಾಗಿದೆ ಎಂದರೆ ನಾವು ಸ್ಕೇಲ್ ಕೊಡತಕ್ಕಂತಹದು 1.1.96 ರಿಂದ, ಆದರೆ ಪ್ರೊಮೋಷನ್ಸ್ ಕೊಡುವುದರಲ್ಲಿ ನಮಗೆ ಐಸಿಆರ್ ಗೈಡ್‌ಲೈನ್ಸನ್ನು ಮೀರಿ ಸಾಕಷ್ಟು ವ್ಯತ್ಯಾಸಗಳು ಆಗಿ ಹೋಗಿದೆ. ಅದನ್ನು ಮಾನ್ಯತೆ ಮಾಡಬೇಕಾಗುತ್ತದೋ ಇಲ್ಲವೋ ಎಂಬ ಬಗ್ಗೆ ನಾವು ವಿಚಾರ ಮಾಡಿ, ನಾವು ಶಿಕ್ಷಕರ ಬಗ್ಗೆ ಇವತ್ತು ಕುಳಿತು ಯಾವುದೇ ರೀತಿಯಲ್ಲಿ ಕೂಡ ಅವರಿಗೆ ತೊಂದರೆ ಆಗಬಾರದು ಎನ್ನತಕ್ಕ ರೀತಿಯಲ್ಲಿ ಆಲ್ ಇಂಡಿಯಾ ಪ್ಯಾಟರ್ನ್‌ನಲ್ಲಿ ಯಾವರೀತಿ ಆಗಿನೆ, ಆ ರೀತಿಯಲ್ಲಿ ನಾವು ಬಹಳ ತೆರೆದ ಮನಸ್ಸಿನಿಂದ ಚರ್ಚೆ ಮಾಡಿದ್ದೇವೆ. ಅವರು ಒಪ್ಪಿಕೊಂಡು ಹೋಗಿ ನಾವು ಸ್ಟ್ರೈಕ್ ಕಾಲ್-ಆಫ್ ಮಾಡುತ್ತೇವೆಂದರು. ನಮ್ಮ ಸರ್ಕಾರದ ಪರವಾಗಿರತಕ್ಕಂತಹ ಎಲ್ಲ ವಿಷಯಗಳನ್ನೂ ಕೂಡ ಪ್ರಸ್ತಾಪ ಮಾಡಿದಾಗ ನಾನು ಸ್ಪಷ್ಟವಾಗಿ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದೇನೆ. ಬೇರೆ ಯೂನಿವರ್ಸಿಟಿಗಳಿಗೆ ಹೋಲಿಸಿದಾಗ ನಾನು ಯಾವರೀತಿಯಲ್ಲೂ ಕೂಡ ಸೌಲಭ್ಯವನ್ನು ಕೊಡುವುದರಲ್ಲಿ ಹಿಂದೆ ಮುಂದೆ ನೋಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ ಮೇಲೆ ಕೂಡ ಧಾರವಾಡದವರು ಸ್ಟ್ರೈಕ್ ಕಾಲ್-ಆಫ್ ಮಾಡಿದ್ದಾರೆ. ಆದರೆ ಬೆಂಗಳೂರಿನವರು ಇನ್ನು ಕಾಲ್-ಆಫ್ ಮಾಡಿಲ್ಲ, ಕಾಲ್-ಆಫ್ ಮಾಡುತ್ತಾರೆಂಬ ವಿಶ್ವಾಸ ನನಗೆ ಇದೆ. ಅವರು ಸ್ಟ್ರೈಕ್ ಮಾಡಿಯೇ ಸವಲತ್ತುಗಳನ್ನು ಪಡೆಯಬೇಕು ಎನ್ನತಕ್ಕ ಪ್ರಶ್ನೆ ಇಲ್ಲ. ಈಗಾಗಲೇ ಐಸಿಎಆರ್‌ನಿಂದ ಬಂದಿರತಕ್ಕಂಥ 80 ಪರ್ಸೆಂಟ್ ಹಣ ಮತ್ತು ರಾಜ್ಯ ಸರ್ಕಾರ 20 ಪರ್ಸೆಂಟ್ ಹಣ ಕೊಡುವುದಕ್ಕೂ ನಾವು ಒಪ್ಪಿದ್ದೇವೆ. ಈಗಾಗಲೇ ನಾನು ಫೈನಾನ್ಸ್ ಸೆಕ್ರೆಟರಿಯವರ ಹತ್ತಿರ ನಿನ್ನೆ ಕುಳಿತು ಮಾತನಾಡಿದ್ದೇನೆ. ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡತಕ್ಕಂತಹ ಕೆಲಸವನ್ನು ಮಾಡುತ್ತೇನೆ. ನಾನು ಸಹಾನುಭೂತಿಯಿಂದ, ಸಂಪೂರ್ಣವಾಗಿ ಶಿಕ್ಷಕರಿಗೆ ಇದರಿಂದ ಸಹಾಯ ಆಗಬೇಕು ಎನ್ನತಕ್ಕ ದೃಷ್ಟಿಯಿಂದಲೇ ಕೆಲಸ ಮಾಡುತ್ತಿದ್ದೇನೆ. ಇದನ್ನು ಈ ಸಭೆಯ ಮುಖೇನ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಮಾನ್ಯ ಭೈರೇಗೌಡರು ಒಂದು ಮಾತು ಹೇಳಿದರು. ಈಗ ಯೂನಿವರ್ಸಿಟಿ ಪ್ರಮೋಷನ್ಸ್ ಬಗ್ಗೆ ಏನು ಎಂದು ಗೊತ್ತಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಒಂದೊಂದು ಟೈಮ್ ಅವರು ಪ್ರೆಷರ್ ಟ್ಯಾಕ್ಟಿಕ್ಸ್ ಕೂಡ ಮಾಡುತ್ತಾರೆ. ಆದರೆ ಹಿಂದೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆದಂತಹದನ್ನು ಗವರ್ನ್‌ಮೆಂಟ್ ಆರ್ಡರ್ ಮಾಡಬೇಕಾದರೆ ನಮಗೆ ಸಾಕಷ್ಟು ಬೆದರಿಕೆಯನ್ನು ಕೂಡ ಹಾಕಿದರು. ಆದರೆ ಯಾವುದೇ ರೀತಿಯಲ್ಲೂ ಕೂಡ ಅವರ ಸ್ಯಾಚ್ಯೂಸ್ ಅಮೆಂಡ್ ಆಗುವವರೆಗೆ ಸರ್ಕಾರದ ಆದೇಶವನ್ನು ಹೊರಡಿಸುವುದಕ್ಕೆ ನಾನು ಒಪ್ಪಲೂ ಇಲ್ಲ. ಕೊನೆಗೆ ಸ್ಯಾಚ್ಯೂಸ್ ಎಲ್ಲಾ ಅಮೆಂಡ್‌ಮೆಂಟ್ ಆದಮೇಲೆ ಗವರ್ನ್‌ಮೆಂಟ್ ಆರ್ಡರ್ ಮಾಡಿದರು. ಗವರ್ನಮೆಂಟ್ ಆರ್ಡರ್ ಮಾಡಬೇಕಾದಾಗ ಎಲ್ಲ ರೀತಿಯಲ್ಲೂ ಕೂಡ

ಐಸಿಎಆರ್ ಗೈಡ್‌ಲೈನ್ಸನ್ನು ಸ್ಟ್ರಿಕ್ಟಾಗಿ ಜಾರಿಗೆ ತರಬೇಕು ಎಂದು ಇದೆ. ಈಗ ವಿಶ್ವವಿದ್ಯಾಲಯದ ಬಗ್ಗೆ ಮಾನ್ಯ ಬೈರೇಗೌಡರಿಗೆ ಸಾಕಷ್ಟು ಗೊತ್ತಿದೆ. ಕೃಷಿಗೆ ಸಂಬಂಧಪಟ್ಟಂತಹ ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ರೀತಿಯಲ್ಲಿ ಸಂಶೋಧನೆ ಆಗಬೇಕಾಗಿದೆ. ಅಂದರೆ ಆ ನೀಡ್ ಬೇಸಿಸ್ ಸಂಶೋಧನೆ ಆಗಬೇಕಾಗಿದೆ. ಅದಕ್ಕೋಸ್ಕರ ನಾವು ಸೈಂಟಿಸ್ಟ್‌ನ್ನು ಡಿಪ್ಲಾಯ್ ಮಾಡಬೇಕಾಗಿದೆ. ಅಲ್ಲಿ ಎಲ್ಲ ರೀತಿಯಲ್ಲಿ ಕೂಡ ಪ್ರೆಷರ್ ಪಾಲಿಟಿಕ್ಸನ್ನು ಕಡಿಮೆ ಮಾಡಬೇಕಾಗಿದೆ. ಆದ್ದರಿಂದ ಯೂನಿವರ್ಸಿಟಿಯವರು ಒಂದು ಸ್ಟ್ರೀಮ್‌ಲೈನ್ ಮಾಡುವುದಕ್ಕೋಸ್ಕರ ಐಸಿಎಆರ್ ಗೈಡ್‌ಲೈನ್ಸ್ ಬಿಟ್ಟು ಯಾವುದೇ ರೀತಿಯಾಗಿ ಪ್ರಮೋಷನ್ಸ್ ಕೊಡುವುದಿಲ್ಲ ಎನ್ನತಕ್ಕ ವ್ಯೂ ಸಹ ಇದೆ. ಯಾವುದೇ ರೀತಿಯ ಪ್ರೆಷರ್ ಟ್ಯಾಕ್ಟಿಕ್ಸ್‌ಗೂ ಕೂಡ ನಾವು ಈಲ್ಡ್ ಆಗುವುದಿಲ್ಲ. ನಮ್ಮ ಗೈಡ್‌ಲೈನ್ಸ್ ಪ್ರಕಾರ ಏನೇನು ಸವಲತ್ತುಗಳು ಇವೆ, ಆ ಸವಲತ್ತನ್ನು ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳ ಬಯಸುತ್ತೇನೆ. ಅದೇ ರೀತಿಯಾಗಿ ಕೂಡ ಅವರಿಂದ ಸೇವೆಯನ್ನು ಕೂಡ ನಾವು ನಿರೀಕ್ಷೆ ಮಾಡುತ್ತೇವೆ. ನಾವು ಒಂದು ಕಡೆ ಐಸಿಎಆರ್ ಸ್ಕೇಲ್ ಮತ್ತು ಯುಜಿಸಿ ಗ್ರಾಂಟ್ಸ್ ಎಂದು ಕೊಟ್ಟುಬಿಟ್ಟು ಅವರ ಹತ್ತಿರ ವರ್ಕನ್ನು ಎಕ್ಸ್‌ಟ್ರಾಕ್ಟ್ ಮಾಡದೇ ಇದ್ದರೆ ಏನಾಗುತ್ತದೆ ಎನ್ನುವ ಬಗ್ಗೆ ಕೂಡ ಸರ್ಕಾರ ಈಗಾಗಲೇ ಯೋಚನೆ ಮಾಡಿದೆ. ನಾವು ಕಟ್ಟುನಿಟ್ಟಾಗಿ ವರ್ಕನ್ನೂ ಎಕ್ಸ್‌ಟ್ರಾಕ್ಟ್ ಮಾಡಬೇಕು ಮತ್ತು ಅವರಿಗೆ ಸವಲತ್ತನ್ನು ಕೊಡಬೇಕು ಎನ್ನತಕ್ಕ ದಿಸೆಯಲ್ಲಿ ಯೋಚನೆ ಮಾಡಿದ್ದೇವೆ. ತಮ್ಮಗಳ ಮುಖೇನ ನಾವು ಯೂನಿವರ್ಸಿಟಿ.....

ಅಧ್ಯಕ್ಷರು: ಕ್ಲಾರಿಫಿಕೇಶನ್‌ಗೆ ಇನ್ನೂ ಮೂರ್ನಾಲ್ಕು ಜನ ಇದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ಅವರ ಡಿಮ್ಯಾಂಡ್ಸ್ ದಿನದಿನಕ್ಕೂ ಬದಲಾವಣೆ ಮಾಡುತ್ತಾ ಹೋದರೆ ಕಷ್ಟವಾಗುತ್ತದೆ. Let them come to me. I have an open mind to solve their problem.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಸ್ಟೈಕ್ ಮಾಡುತ್ತಿರುವವರನ್ನು ತಾವು ಕರೆಸಿ ಸ್ಟೈಕ್‌ನ್ನು ಕಾಲ್-ಆಫ್ ಮಾಡಿಸಬೇಕು. ಏಕೆಂದರೆ ಇದು ಬಹಳ ಇಂಪಾರ್ಟೆಂಟ್ ಏಕೆಂದರೆ ಅವರು ಸ್ಟೈಕ್‌ನಲ್ಲಿ ಇರಬೇಕಾದರೆ ನಾವೇನು ಕಾರ್ಯಕ್ರಮ ಮಾಡಬೇಕು? ಇದು ಬಹಳ ಇಂಪಾರ್ಟೆಂಟ್.

(ಗೊಂದಲ)

ಶ್ರೀ ಚಂದ್ರಕಾಂತ್ ಬೆಲ್ಲದ್: ಅಲ್ಲಿ ಬಹಳ ಉತ್ತಮವಾದಂತಹ ಕೆಲಸಗಳು ನಡೆಯುತ್ತಿದೆ ಎಂದು ನಮ್ಮ ಮುಂತ್ರಿಗಳಿಗೆ ಮತ್ತು ಹಿಂದಿನ ಮಂತ್ರಿಗಳಿಗೆ ಎಲ್ಲರಿಗೂ ಗೊತ್ತಿದೆ. ಆದರೆ ಅವರು ಇವತ್ತು ಸ್ಟೈಕ್‌ನ್ನು ವಾಪಸ್ ತೆಗೆದುಕೊಂಡಿದ್ದಾರೆ ಎನ್ನುವುದು ಸಂತೋಷದ ವಿಚಾರ. ಏಕೆಂದರೆ ಯುಜಿಸಿ ಮತ್ತು ಐಸಿಎಆರ್ ಸವಲತ್ತುಗಳು

ಸಿಗಬೇಕಾಗಿದ್ದು, ಉಳಿದ ಎಲ್ಲಾ ಯೂನಿವರ್ಸಿಟಿಯ ಪ್ರೊಫೆಸರ್ಸ್‌ಗೆ ಏನು ಸಿಗುತ್ತಿದೆ, ಅದು ಅವರಿಗೆ ಸಿಗಬೇಕಾದ್ದು ನ್ಯಾಯಾವಾದುದು.

ಅಧ್ಯಕ್ಷರು: ಅವರು ಉತ್ತರವನ್ನು ಹೇಳಿದ್ದಾರಲ್ಲ. ಪಕೆ ರಿಪೀಟ್ ಮಾಡುತ್ತೀರಿ?

ಶ್ರೀ ಚಂದ್ರಕಾಂತ್ ಬೆಲ್ಲದ್: ಇವತ್ತು ನಮ್ಮ ರಾಜ್ಯ ಅಷ್ಟೇ ಅಲ್ಲ, ಇಡೀ ರಾಷ್ಟ್ರ ಬಹಳಷ್ಟು ನಿರೀಕ್ಷಣೆ ಮಾಡುತ್ತಿದೆ ಈ ಕೃಷಿವಿಶ್ವವಿದ್ಯಾನಿಲಯಗಳಿಂದ ಆ ದೃಷ್ಟಿಯಿಂದ ಅಲ್ಲಿ ಸಂಶೋಧನೆಗೆ ಮತ್ತು ಉಳಿದ ವಿಷಯಗಳಿಗೆ ಒತ್ತು ಕೊಡಬೇಕಾದರೆ ಅವರಿಗೆ ಸಿಗಬೇಕಾದಂತಹ ಯುಜಿಸಿ ಮತ್ತು ಐಸಿಎಆರ್ ಸವಲತ್ತುಗಳನ್ನು ಅವರಿಗೆ ಒದಗಿಸಿಕೊಡಬೇಕು.

ಅಧ್ಯಕ್ಷರು: ಅವರು ಸಮಗ್ರವಾಗಿ ಉತ್ತರ ಹೇಳಿದ್ದಾರೆ. ಶ್ರೀ ಯೋಗೀಶ್ ಭಟ್ ತಾವು ಹೇಳಿ.

ಶ್ರೀ ಚಂದ್ರಕಾಂತ್ ಬೆಲ್ಲದ್: ಧಾರವಾಡ ಯೂನಿವರ್ಸಿಟಿಯವರು ಸ್ಟೈಕನ್ನು ವಾಪಸ್ ತೆಗೆದುಕೊಂಡಿದ್ದಾರೆ. ಹಾಗೆಯೇ ಬೆಂಗಳೂರು ವಿಶ್ವವಿದ್ಯಾನಿಲಯದವರೂ ಸಹ ಸ್ಟೈಕ್‌ನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಅವರಿಗೆ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಯೋಗೀಶ್ ಭಟ್ ಅವರನ್ನು ಆದ ಮೇಲೆ ಆತ್ಮಾನಂದ ಅವರದ್ದು ನಾಳೆ ತೆಗೆದುಕೊಳ್ಳೋಣ. ಯೋಗೀಶ್ ಭಟ್ ಅವರದ್ದು ಆದಮೇಲೆ ಇನ್ನು ಉಳಿದಿರುವ ಐದು ಶೂನ್ಯ ವೇಳೆ ವಿಚಾರಗಳನ್ನು ನಾಳೆಗೆ ತೆಗೆದುಕೊಳ್ಳೋಣ.

ಶ್ರೀ ಎಂ.ಎಸ್.ಆತ್ಮಾನಂದ: ನಾವು ಕೇಳಿಕೊಂಡೇ ಇದ್ದೇವೆ. ನಮ್ಮ ವಿಚಾರ ಪ್ರಸ್ತಾಪ ಮಾಡಬೇಕು.

(ಗೊಂದಲ)

ಅಧ್ಯಕ್ಷರು: ನಾನು ಈಗ ಸಭೆಯನ್ನು ಅಡ್ಜರ್ನ್ ಮಾಡಿ ಹೋಗುತ್ತೇನೆ ಅಷ್ಟೆ! ನಾನು ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೂ ಕೂಡ ನೀವು ಹೀಗೆ ಹೇಳುತ್ತಿದ್ದರೆ ನಾನು ಜೀರೋ ಅವರ್‌ನ್ನು ಕ್ಯಾನ್ಸಲ್ ಮಾಡಬೇಕಾಗುತ್ತದೆ ಅಷ್ಟೆ. ದಿವಸಕ್ಕೆ ಐದೈದು ತೆಗೆದುಕೊಳ್ಳೋಣ ಎಂದು ನಾನು ಹೇಳುತ್ತಿದ್ದೇನೆ. ಹೀಗೆ ಎಲ್ಲರೂ ಎದ್ದು ನಿಂತರೆ ಹೇಗೆ? ಈಗ ಶ್ರೀ ಯೋಗೀಶ್ ಭಟ್ ಅವರದ್ದು ಕೊನೆಯ ವಿಚಾರ. ಮಿಕ್ಕ ಐದನ್ನು ನಾಳೆ ತೆಗೆದುಕೊಳ್ಳೋಣ.